ಹಿಂದಿನ ದಲಿತ ಚಿತ್ರಗಳ ಸಂಕಟಗಳನ್ನು ಅರ್ಥಮಾಡಿಕೊಂಡು, ವರ್ತಮಾನದ ಸತ್ಯಗಳನ್ನು ಅಭಿವ್ಯಕ್ತಿಸುವಾಗ ಧೈರ್ಯ ಮತ್ತು ಪ್ರಾಮಾಣಿಕತೆ ಎರಡೂ ಬೇಕು. ಗುರುಪ್ರಸಾದ್ ಆ ನಿಟ್ಟಿನಲ್ಲಿ ಕಥನದಂತ ಕಲೆಯ ರೂಪದಲ್ಲಿ ಆ ಬಗೆಯ ಗುರುತುಗಳನ್ನು ತರಲು ಯತ್ನಿಸುತ್ತಿದ್ದಾರೆ. ಸಂಕರ ಬದುಕು ದಲಿತ ಜಗತ್ತನ್ನು ವಿಸ್ತಾರ ಮಾಡಿತೇ? ಎಂಬ ಪ್ರಶ್ನೆಯೂ ಇಲ್ಲಿ ಮುಖ್ಯವೇ ಆಗಿದೆ. ಅವಮಾನ ಮತ್ತು ಮುಜುಗರ ಇವೆರಡೂ ಸರಳ ಪದಗಳಾದರೂ ಮನುಷ್ಯನನ್ನು ಅಲ್ಲಾಡಿಸಿವೆ. ಒಗ್ಗೂಡುತ್ತಿರುವುದು ಬರೀ ದೇಹಗಳೋ ಅಥವಾ ಮನಸ್ಸುಗಳೋ ಎಂಬ ಪ್ರಶ್ನೆ ಗೂಢವಾಗಿಯೇ ಇದೆ. ಇವರ ಕಥೆಗಳಲ್ಲಿ ನವ ಅಸ್ಪೃಶ್ಯತೆಯು ವರ್ತಮಾನದ ಕೆಂಡವಾಗಿ ಬರುತ್ತದೆ. ಇದರ ಜೊತೆಗೆ ದಲಿತ ತತ್ವದ ಬಿರುಕುಗಳನ್ನು ಅನಾವರಣ ಮಾಡುವಾಗ ಅಂತರಂಗದ ಸತ್ಯಗಳಿಗೆ ಎಡತಾಕುವುದು ಮುಖ್ಯವೇ.

ತೀರಾ ಸಹಾನುಭೂತಿ ಮತ್ತು ಅತಿ ಭಾವುಕತೆಯಿಂದ ದಲಿತ ಕಥೆಗಳು ಮುಕ್ತಗೊಂಡರೆ ಮಾತ್ರ ಹೊಸ ದಾರಿಯನ್ನು ಹಿಡಿಯಬಲ್ಲವು. ಹೊಸಬರ ಕಾವ್ಯಜಗತ್ತಿನಲ್ಲಿ ದಲಿತ ಚಿತ್ರಗಳು ಪರಿಣಾಮಕಾರಿಯಾಗಿ ಮತ್ತು ಬಹುಮೂಲದಿಂದ ಒಳನುಗ್ಗಿದ್ದವು. ಅಲ್ಲಿನ ತಾತ್ವಿಕತೆಯನ್ನು ಗುರುತಿಸಲು ಅವರು ಬಳಸುವ ನುಡಿಗಟ್ಟುಗಳೇ ದಾರಿ ಮಾಡಿಕೊಟ್ಟಿದ್ದವು. ಕಥನದಲ್ಲಿ ಆ ಬಗೆಯ ಗಟ್ಟಿಯಾದ ನಿಲುವುಗಳು ಮಾಗುವ ದಾರಿಯಲ್ಲಿವೆ. ಆದರೆ, ಕಥೆಯಂಥ ಕೊಂಚ ವಿಸ್ತಾರದ ಫಾರಂನಲ್ಲಿ ಜಾತಿಲೇಪಿತ ಹೊಸ ಬಗೆಯ ಗ್ರಾಮ ಬದುಕಿನ ನಾಡಿ ಹಿಡಿಯುವ ಪ್ರಯತ್ನವನ್ನು ಕೆಲ ಕಥೆಗಾರರು ಮಾಡುತ್ತಿದ್ದಾರೆ. ಗ್ರಾಮ ಬದುಕುಗಳು ಮತ್ತಷ್ಟು ರಾಜಕಾರಣದ ಕಕ್ಷೆಯೊಳಗೆ ನಲುಗುವ ಸ್ಥಿತಿಯಲ್ಲಿವೆ; ತಮಗೆ ದಕ್ಕಿದ ಭೂಮಿಯನ್ನು ಉಳಿಸಿಕೊಳ್ಳಲಾರದ ಸ್ಥಿತಿಯಲ್ಲಿದ್ದಾರೆ. ಕಾಮ ಮತ್ತು ಹುಸಿ ಪ್ರೇಮಗಳು ಮುಗ್ಧ ಹೆಣ್ಣು ಜೀವಗಳನ್ನು ನಾಶದ ಅಂಚಿಗೆ ತಳ್ಳುವ ರೀತಿಯಿದೆ. ಸಮಕಾಲೀನ ಘಟನೆಗಳನ್ನೇ ವಸ್ತುವನ್ನಾಗಿ ಪಡೆಯುವ ಕಥೆಗಳು ಸಾಕಷ್ಟು ಸಮಸ್ಯೆಗಳನ್ನು ಎದುರುಗೊಂಡಿವೆ. ಇಂಥ ಸಂದರ್ಭದಲ್ಲಿ ಕಥೆ-ಲೇಖನ ಇವುಗಳ ನಡುವೆ ವ್ಯತ್ಯಾಸ ಅರಿಯದಿದ್ದರೆ ಕಷ್ಟ. ನಿರೂಪಣೆಯೇ ಹಲವು ಬಾರಿ ನಮ್ಮನ್ನು ದಡ ಸೇರಿಸಬೇಕು. ಎಂಥ ತಾತ್ವಿಕತೆಯನ್ನಾದರೂ ಗಟ್ಟಿಯಾದ ನಿರೂಪಣೆ ನಿಭಾಯಿಸಬಲ್ಲದು. ಗ್ರಾಮ ಮೂಲದ ಅನೇಕ ಕಥೆಗಾರರು ಈ ಹಾದಿಯನ್ನು ಸರಿಯಾಗಿ ಅರಿತಿಲ್ಲ. ಸಿಟ್ಟು ಮತ್ತು ಅನಗತ್ಯ ದ್ವೇಷ ಕಥೆಯ ಹೂರಣವನ್ನು ಕಸಿಯಬಲ್ಲದು. ಇದಕ್ಕಿರುವ ಪರಿಹಾರ ಪರಂಪರೆಯ ಓದು ಮತ್ತು ಸಾವಧಾನತೆಯೊಂದೇ. ಯಾವುದೇ ಪಾತ್ರಗಳು ವೈಚಾರಿಕತೆಯನ್ನು 'ಕಾಲ' ಮತ್ತು 'ನಿರೂಪಣೆಯ' ಮೂಲಕವೇ ಸಾಧಿಸುತ್ತವೆ. ತಳ ಲೋಕದಿಂದ ಹೆಕ್ಕಿ ಬರೆಯುವ ಬರಹಗಾರರಿಗೆ ಇರುವ ದೊಡ್ಡ ಸವಾಲು ಕ್ಷಿಪ್ರಗತಿಯಲ್ಲಿ ಪಲ್ಲಟವಾಗುತ್ತಿರುವ ಗ್ರಾಮ ಬದುಕು ಹಾಗು ಜಾತಿಯ ಭೂತಗಳು. ಹೀಗೆ ಹೇಳುವಾಗ ಆತ್ಮರತಿಗಳಿಂದ ಜಾರಿಕೊಳ್ಳುವುದಕ್ಕಿಂತ 'ಹೊಣೆಗಾರಿಕೆ'ಯಿಂದ ಮುನ್ನುಗ್ಗುವುದೇ ಒಳಿತು. ಇಲ್ಲದಿದ್ದರೆ ನಮ್ಮ ಕಥನಗಳು ಬರೀ ಅಸ್ಥಿಪಂಜರಗಳಾಗುತ್ತವೆ. ತಳ ಸಮುದಾಯದ ಬರಹಗಾರರಿಗೆ ಎಂದಿಗಿಂತ ಇಂದು ವೈಯಕ್ತಿಕ ಜವಾಬ್ದಾರಿ ಅಗತ್ಯ. ಏಕೆಂದರೆ, ಸುತ್ತಣ ಲೋಕ ವಿಚಿತ್ರ ಮಾನಸಿಕ ಹೊಯ್ದಾಟಗಳಲ್ಲಿ ನಲುಗುತ್ತಿದೆ. ತಾನು ನಿರ್ಮಿಸುವ ಕಥನ ಜಗತ್ತು ತಣ್ಣನೆಯ ನಿರೂಪಣೆಯ ಜೊತೆಗೆ ಸುಡುವ ಸತ್ಯಗಳನ್ನು ಅನಾವರಣ ಮಾಡಬೇಕು. ಇದಕ್ಕೆ ಬೇಕಾಗುವುದು ಹಿಂದೆ ಹೇಳಿದಂತೆ 'ಹೊಣೆಗಾರಿಕೆ' ಮತ್ತು 'ವ್ಯವಧಾನ'.

ಈ ಬಗೆಯ ಹೊಣೆಗಾರಿಕೆಯನ್ನು ಗಂಭೀರವಾಗಿ ತೆಗೆದುಕೊಂಡಿರುವ ಸ್ವಾಮಿ ಪೊನ್ನಾಚಿ ಕೆಲವು ಕಥೆಗಳಿಂದ ಗಮನಸೆಳೆಯುತ್ತಾರೆ. ಅವರ ಆರಂಭದ ಕಥೆಗಳಾದ 'ಧೂಪದ ಮಕ್ಕಳು', 'ಭೂತ' ಇತ್ಯಾದಿ ಕಥೆಗಳಲ್ಲಿ ವಿವರಗಳು ಕೇವಲ ಪರಿಚಯಕ್ಕೆ ಬರುತ್ತವೆ. ಈ ಕ್ರಮ ವಸ್ತುವಿನ ಸಾಗುವಿಕೆಗೆ ಸಹಾಯಕವಾಗಲಾರದು. ಹಾಸ್ಯ ಹಲವು ಬಾರಿ ಕಥೆಗಳ ಗಂಭೀರತೆಯನ್ನು ಸೀಳುತ್ತದೆ. ಪೊನ್ನಾಚಿಯವರು ಭೂತದ ಕೆಲ ವಿಚಾರಗಳನ್ನು ಎತ್ತಿಕೊಂಡು ಕಥೆ ಬರೆಯುತ್ತಾರೆ. ಇವುಗಳಲ್ಲಿ ಅಡಗಿರುವ 'ಸಂಗತಿ'ಗಳು ಸಾಮಾನ್ಯ ಆಗಿಬಿಡುವ ಹಂತಕ್ಕೆ ತಲುಪುತ್ತವೆ. 'ಕುತೂಹಲ' ಬದುಕಿಗೆ ಹೊಂದಿಕೊಳ್ಳಲಾಗದ ಸ್ಥಿತಿಯನ್ನು ಅನುಭವಿಸುತ್ತದೆ. ಕುತೂಹಲವನ್ನು ಕೇವಲ ರಂಜನೆಗೆ ಬಳಸಿಕೊಂಡರೆ ಕಷ್ಟ. ಅದು ತೀವ್ರತೆಗೆ ಬರಬೇಕು. ವಾಸ್ತವದಲ್ಲಿದ್ದುಕೊಂಡೇ ಭ್ರಮೆಯ ಕೆಲವು ಸಂಗತಿಗಳನ್ನು ಅಭಿವ್ಯಕ್ತಿಸುವಾಗ ನಾವು ಹುಡುಕುತ್ತಿರುವುದೇನು? ಎಂಬುದನ್ನು ಅರಿಯಬೇಕು. ಭ್ರಮೆಯಲ್ಲೂ ಕೂಡ ಒಂದು ಕಾಣ್ಕೆ ಇರುತ್ತದೆ. ಗ್ರಾಮ ಮತ್ತು ನಿಸರ್ಗದ ಸುತ್ತಣ ಜಗತ್ತಿಗೆ ವಿಚಿತ್ರವಾದ ನಂಟಿದೆ. ಇದರಲ್ಲಿ ದೆವ್ವದ ನಂಟೂ ಇದ್ದಿರಬಹುದು. ಈ ದಾರಿಯನ್ನು ಪೊನ್ನಾಚಿ ಪಾತ್ರಗಳ ಸಂಭಾಷಣೆಯಲ್ಲಿ ಕುತೂಹಲ ತರುತ್ತಾರೆಯೇ ಹೊರತು ಕಾಣ್ಕೆಯಲ್ಲಲ್ಲ.